# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ : 3372 /2022

**ಚಾಸಾ :- 02 / ಪ್ರಾಸಾ :- 02**

| | |
|---|---|
| ಹೆಸರು | ನರಸೇಗೌಡ |
| ತಂದೆ ಹೆಸರು | ಚಿಕ್ಕಣ್ಣ |
| ವಯಸ್ಸು | 62 |
| ಉದ್ಯೋಗ | ವ್ಯವಸಾಯ |
| ವಿಳಾಸ | ಬೆಳಗುಂಬ ,ಮಾಗಡಿ ತಾಲ್ಲೂಕು |

**ದಿನಾಂಕಃ 23.05.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1 ರವರು ನನ್ನ ಮಗಳು, ಚಾಸಾ-3 ನನ್ನ ಪತ್ನಿ, ಚಾಸಾ-4 ರಿಂದ 9 ರವರ ಪರಿಚಯ ಇರುತ್ತದೆ. ಆರೋಪಿಗಳು ಗೊತ್ತಿರುತ್ತಾರೆ. 1 ನೇ ಆರೋಪಿಯು ಚಾಸಾ-1 ರವರನ್ನು ದಿನಾಂಕ 04.11.2020 ರಂದು ಚುಂಚನಗಿರಿಯಲ್ಲಿರುವ ಕಾಲಭೈರವೇಶ್ವರ ದೇವಸ್ಥಾನದಲ್ಲಿ ವಿವಾಹ ಆಗಿರುತ್ತಾರೆ. ಕೋರೋನಾ ಕಾಲ ಇದ್ದಿದ್ದರಿಂದ 1 ನೇ ಆರೋಪಿ ಹಾಗೂ ಚಾಸಾ- 1 ರವರ ವಿವಾಹವು ಸರಳ ವಿವಾಹವಾಗಿರುತ್ತದೆ. ನಂತರ 1 ನೇ ಆರೋಪಿ ಹಾಗೂ ಚಾಸಾ- 1 ರವರು ಮಾಗಡಿಯ ಜ್ಯೋತಿ ನಗರದಲ್ಲಿ ವಾಸ ಇದ್ದರು. ನಂತರ 1 ನೇ ಆರೋಪಿ ಹಾಗೂ ಚಾಸಾ-1 ರವರು ಜಗಳ ಮಾಡಿಕೊಂಡು ವೈಮನಸ್ಸು ಇತ್ತು. 1 ನೇ ಆರೋಪಿಯು ಬೆಳಗುಂಬದಲ್ಲಿ ಇರುವ ಜಮೀನನ್ನು ನಿಮ್ಮ ತಂದೆ ತಾಯಿಯವರಿಂದ ಬರೆಸಿಕೊಂಡು ಬಾ

ಎಂದು ಚಾಸಾ- 1 ರವರಿಗೆ ಹೇಳುತ್ತಿದ್ದರು. ನಂತರ ನಮಗೂ ಹಾಗೂ 1 ನೇ ಆರೋಪಿಗೂ ಸ್ವಲ್ಪ ವೈಮನಸ್ಸು ಪ್ರಾರಂಭ ಆಗಿತ್ತು. ನನ್ನ ಮಗ ಕಾರಣಾಂತರಗಳಿಂದ ಮೃತಹೊಂದಿದ್ದರು. ನಂತರ ನಾನು ನನ್ನ ಮಗನ ಸ್ಮಾರಕವನ್ನು ಬೆಳಗುಂಬದಲ್ಲಿ ಮಾಡಲು ಪ್ರಯತ್ನ ಪಟ್ಟಿದ್ದೆನು. ಆಗ 1 ನೇ ಆರೋಪಿಯು ಅಲ್ಲಿ ಸ್ಮಾರಕ ಮಾಡಬೇಡಿ ಜಮೀನನ್ನು ನನಗೆ ಬರೆದುಕೊಡಿ ಎಂದು ಕೇಳಿದ್ದನು. ಹಾಗೂ ಅನಾವಶ್ಯಕವಾಗಿ ಸ್ಮಾರಕಕ್ಕೆ ಏಕೆ ಹಣ ಖರ್ಚು ಮಾಡುತ್ತೀರಿ ಅದೇ ಹಣವನ್ನು ನನಗೆ ಕೊಡಿ ಎಂದು ಕೇಳಿದ್ದರು. ನಾವು ಆ ಸಮಯದಲ್ಲಿ ಬೆಂಗಳೂರಿನಲ್ಲಿ ವಾಸ ಇದ್ದೆವು ಆಗ ಕೊರೋನ ಕಾಲ ಇದ್ದಿದ್ದರಿಂದ ಜ್ಯೋತಿನಗರದಲ್ಲಿ ಇದ್ದಿದ್ದ 1 ನೇ ಆರೋಪಿಯ ಮನೆಗೆ ಉಳಿದುಕೊಳ್ಳಲು ಹೋದಾಗ ನನಗೂ ಹಾಗೂ 1 ನೇ ಆರೋಪಿಯ ನಡುವೆ ಗಲಾಟೆ ಆಗಿರುತ್ತದೆ. ಆ ಸಮಯದಲ್ಲಿ 1 ನೇ ಆರೋಪಿಯು ನನ್ನ ಕೊರಳಿನ ಪಟ್ಟಿ ಹಿಡಿದು ಹಲ್ಲೆ ಮಾಡಿ ಆಚೆ ಹಾಕಿರುತ್ತಾರೆ. ಆಗ ನಾನು ಚಾಸಾ-1 ರವರಿಗೆ ನೀನು ನಮ್ಮ ಜೊತೆ ಬರುವುದಾದರೆ ಬಾ ಎಂದು ಇಲ್ಲ ಎಂದರೆ ಇಲ್ಲೇ ಇರಬಹುದು ಎಂದು ಹೇಳಿದವು, ಆಗ ಚಾಸಾ-1 ರವರು ನಮ್ಮ ಜೊತೆಯಲ್ಲೇ ಬರುತ್ತೇವೆ ಎಂದು ಹೇಳಿ ರಾತ್ರಿ 10.30 ರ ಸಮಯದಲ್ಲಿ ನಮ್ಮ ಜೊತೆ ಬಂದಿರುತ್ತಾಳೆ. ನಂತರ 1 ನೇ ಆರೋಪಿಯು ಚಾಸಾ-1 ರವರಿಗೆ ಪೋನ್ ಮಾಡಿ ಹಾಗೂ ಬೇರೆಯವರಿಂದ ಸಹ ಪೋನ್ ಮಾಡಿ ಬರಲು ಕೇಳಿದ್ದರು ಆಗ ಚಾಸಾ-1 ರವರು ನಾನು ಬರುವುದಿಲ್ಲವೆಂದು ಹೇಳಿರುತ್ತಾರೆ. ಗಲಾಟೆ ಆದ ನಂತರ ನಾನು ಮಾದನಾಯಕನಹಳ್ಳಿ ಪೋಲಿಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇನೆ.

1 ನೇ ಆರೋಪಿಯು ವಿಚ್ಛೇಧನಕ್ಕಾಗಿ ಮಾಗಡಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು. 1 ನೇ ಆರೋಪಿಯೇ ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದರಿಂದ ನಾವು ಹಾಜರು ಆಗಿರುವುದಿಲ್ಲ. ನಂತರ 1 ನೇ ಆರೋಪಿ

ಹಾಗೂ ಚಾಸಾ-1 ರವರ ನಡುವೆ ವಿಚ್ಛೇಧನ ಆಗಿರುತ್ತದೆ.

**ಪಾಟೀ ಸವಾಲು :- ಶ್ರೀ. ಎಲ್ ಜಿ ಜಿ** ವಕೀಲರಿಂದ **ಆರೋಪಿಗಳ** ಪರವಾಗಿ :-

ನಿಮ್ಮ ಮಗಳಿಗೆ ದೂರನ್ನು ತಯಾರಿಸಲು ವಕೀಲರನ್ನು ನೇಮಿಸಿಕೊಟ್ಟವರು ಯಾರು ಎಂದರೆ ಸಾಕ್ಷಿ ನಾನೇ ಎಂದು ನುಡಿಯುತ್ತಾರೆ. ದೂರನ್ನು ತಯಾರಿಸಲು ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ಮಗಳು ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿ ಏನೆಲ್ಲಾ ಬರೆದಿದೆ ಎಂಬುದರ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದೂರನ್ನು ಕೊಡಲು ನಿಮ್ಮ ಮಗಳು ಒಬ್ಬರೇ ಹೋಗಿದ್ದರ ಅಥವಾ ನೀವೂ ಜೊತೆಯಲ್ಲಿ ಹೋಗಿದ್ದಿರ ಎಂದರೆ ಸಾಕ್ಷಿ ನಾನು ಹೋಗಿದ್ದೆನು ಎಂದು ನುಡಿಯುತ್ತಾರೆ. ದೂರನ್ನು ಕೊಡುವಾಗ ವಕೀಲರು ಬಂದಿದ್ದರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದೂರಿನ ಜೊತೆ ಏನಾದರೂ ದಾಖಲೆಗಳನ್ನು ಪೋಲಿಸರಿಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಲಗ್ನಪತ್ರಿಕೆ, ಪೋಟೋ ಹಾಗೂ ಒಡವೆಚೀಟಿಗಳನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಮಾಚೋಹಳ್ಳಿ ಗೇಟ್ ಹತ್ತಿರ ನೀವು ವಾಸ ಮಾಡುತ್ತಿದ್ದೀರಿ ಎಂದು ತೋರಿಸಲು ಪೋಲಿಸರಿಗೆ ಯಾವ ದಾಖಲೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಆಧಾರ್ ಕಾರ್ಡ್ ಎಂದು ನುಡಿಯುತ್ತಾರೆ.

ಆರೋಪಿಗಳು ಮಾಚೋಹಳ್ಳಿ ಗೇಟ್ ?ಹತ್ತಿರ ಬಂದು ಏನಾದರೂ ಗಲಾಟೆ ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ 26.06.2021 ರ ನಂತರ 1 ನೇ ಆರೋಪಿಯು ನಿಮ್ಮ ಮನೆಗೆ ಬಂದಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ 26.06.2021 ರ ನಂತರ ನಿಮ್ಮ ಮಗಳು ಎಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅಂಜನಾನಗರದಲ್ಲಿ ಇರುವ ಪೆಟ್ ಬಜಾರ್ ಕ್ಲೀನಿಕ್ ನಲ್ಲಿ ಎಂದು

ನುಡಿಯುತ್ತಾರೆ. ಅಂದರೆ ಬಮೂಲ್ ನಲ್ಲಿ ರಾಜಿನಾಮೆ ಕೊಟ್ಟು ಕೆಲಸ ಮಾಡುತ್ತಿದ್ದರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಗಲಾಟೆಯಾದ ಎಷ್ಟು ದಿನಗಳ ನಂತರ ಸದರಿ ಬಮೂಲ್ ಕರ್ತವ್ಯಕ್ಕೆ ರಾಜಿನಾಮೆ ನೀಡಿರುತ್ತಾರೆ ಎಂದರೆ ಸಾಕ್ಷಿ ಒಂದು ತಿಂಗಳ ನಂತರ ಎಂದು ನುಡಿಯುತ್ತಾರೆ. ಮಾಗಡಿ ಮನೆಯನ್ನು ಬಿಟ್ಟು ಹೋದ ನಂತರ ನಿಮ್ಮ ಹಾಗೂ ಆರೋಪಿಗಳ ನಡುವೆ ಏನಾದರೂ ರಾಜಿ ಪಂಚಾಯ್ತಿ ಆಗಿತ್ತೆ ಎಂದರೆ ಸಾಕ್ಷಿ ಆಗಿರುವುದಿಲ್ಲ ಆದರೆ ಎಂ ಬಿ ನರಸಿಂಹಮೂರ್ತಿ, ಮುರುಳಿ ರವರು ಬಂದಿದ್ದರು ಆಗ ನಾವು ನಡೆದ ವಿಷಯಗಳನ್ನು ಹೇಳಿದ್ದೆವು ಆಗ ಸದರಿಯವರು ನಿಮ್ಮ ಇಷ್ಟ ಎಂದು ಹೇಳಿ ಹೋದರು. ನೀವು ಸದರಿ ನರಸಿಂಹಮೂರ್ತಿ ಹಾಗೂ ಮುರಳಿಯವರಿಗೆ ಚಾಸಾ-1 ರವರನ್ನು ಕಳುಹಿಸುವುದಿಲ್ಲ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿ ನಾನು ಹೇಳಿರುವುದಿಲ್ಲವೆಂದು ನುಡಿಯುತ್ತಾರೆ.

ನೀವು ಮಾಗಡಿ ಪೋಲಿಸ್ ಠಾಣೆಯಲ್ಲಿ ರೋಹಿತ್ ಗೌಡ ಎಂಬುವವರ ವಿರುದ್ಧ ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದೂರನ್ನು ಪೋಲಿಸ್ ಠಾಣೆಯಲ್ಲಿ ರಾಜಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ರೋಹಿತ್ ಗೌಡ ಯಾರು ಎಂದರೆ ಸಾಕ್ಷಿಯು ಬೆಳಗುಂಬದಲ್ಲಿ ಇರುವ ನನ್ನ ಮನೆಯ ಪಕ್ಕದ ಮನೆಯವರು ಎಂದು ನುಡಿಯುತ್ತಾರೆ. ನಿಮಗೆ ಹಾಗೂ ನಿಮ್ಮ ಕುಟುಂಬದವರಿಗೆ ಸದರಿ ರೋಹಿತ್ ಗೌಡ ಗೊತ್ತಿರುವ ಹುಡುಗ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ರೋಹಿತ್ ಗೌಡ ಹಾಗೂ ಮೃತಪಟ್ಟ ನಿಮ್ಮ ಮಗ ಇಬ್ಬರೂ ಸ್ನೇಹಿತರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ರೋಹಿತ್ ಗೌಡ , ನಿಮ್ಮ ಮಗಳು ಹಾಗೂ ನಿಮ್ಮ ಮಗನ ನಡುವೆ ಮೆಸೇಜ್ ಗಳು ಹಾಗೂ ವಾಟ್ಸ್ ಆಫ್ ಕಾಲ್ ಗಳು ರವಾನೆ ಆಗುತ್ತಿದ್ದವು ಎಂದರೆ ಸಾಕ್ಷಿ

ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮಗ ಕುಲದೀಪ್ ಗೌಡ ಯಾವ ರೀತಿ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿ ಹಾರ್ಟ್ ಅಟ್ಯಾಕ್ ನಿಂದಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಆಸ್ಪತ್ರೆಯಲ್ಲಿ ಮರಣ ಹೊಂದಿದ್ದರು ಎಂದರೆ ಸಾಕ್ಷಿ ಕೆಂಗನಾರ್ ಆಸ್ಪತ್ರೆಯಲ್ಲಿ ಎಂದು ನುಡಿಯುತ್ತಾರೆ. ಸದರಿ ಕೆಂಗನಾರ್ ಆಸ್ಪತ್ರೆಯವರಿಗೆ ನನ್ನ ಮಗನಿಗೆ ಕರೆಂಟ್ ಶಾಕ್ ಹೊಡೆದು ಮೃತಪಟ್ಟಿರುತ್ತಾರೆ ಎಂದು ಮಾಹಿತಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಕುಲದೀಪ್ ಗೌಡ ಮೃತಪಟ್ಟ ಬಗ್ಗೆ ವಿಮಾ ಹಣವನ್ನು ಪಡೆದಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವಿಮಾ ಹಣವನ್ನು ಪಡೆಯುವಾಗ ಹಾರ್ಟ್ ಅಟ್ಯಾಕ್ ಎಂದು ಮಾಹಿತಿ ನೀಡಿ ವಿಮಾ ಹಣ ಪಡೆದಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಮಾಹಿತಿ ನೀಡಿ ವಿಮಾ ಹಣವನ್ನು ಪಡೆದಿರುತ್ತಾರೆ ಎಂದು ಸದರಿ ರೋಹಿತ್ ಗೌಡ ನಿಮ್ಮ ವಿರುದ್ದ ಮಾಗಡಿ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಮಗಳು ಹಾಗೂ ಸದರಿ ರೋಹಿತ್ ಗೌಡರವರ ಮಧ್ಯೆ ಸುಮಾರು ವರ್ಷಗಳಿಂದ ಜೊತೆಯಲ್ಲಿ ಇದ್ದು ಕೇರಳಕ್ಕೂ ಹೋಗಿ ಬಂದಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ನಿಮ್ಮ ಮಗಳು ಹಾಗೂ ರೋಹಿತ್ ಗೌಡ ನಡುವೆ ಆದಂತಹ ಮೆಸೇಜ್ ಗಳನ್ನು ನಿಮ್ಮ ಮಗ ಜೀವಂತ ಇದ್ದಾಗ 1 ನೇ ಆರೋಪಿಗೆ ಕಳುಹಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ನಿಮ್ಮ ಮಗಳು ರೋಹಿತ್ ಗೌಡನೊಂದಿಗೆ ಕ್ರಶ್ ಇದ್ದರೂ 1 ನೇ ಆರೋಪಿಯು ಡಾಕ್ಟರ್ ಆದ ಕಾರಣ ಪ್ರೀತಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಶ್ಚಿಥಾರ್ತ ಹಾಗೂ ವಿವಾಹದ ಸಮಯದಲ್ಲಿ ಸದರಿ ವಿಷಯವನ್ನು ನೀವು ಆರೋಪಿಗಳಿಂದ ದೂರ ಇಟ್ಟಿದ್ದಿರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಮದುವೆ ಮಾಡಲು ಚುಂಚನಗಿರಿ ಮಠಕ್ಕೆ ರೂ.20,000/- ಹಣವನ್ನು ನೀವೆ ಕಟ್ಟಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮದುವೆಗೆ ನಿಮ್ಮ ಕಡೆಯಿಂದ ಹಾಗೂ ಆರೋಪಿಗಳ ಕಡೆಯಿಂದ ಬಂದವರಿಗೆ ಮಠದಲ್ಲಿಯೇ ಊಟದ ವ್ಯವಸ್ಥೆ ಇತ್ತು ಎಂದರೆ ಸಾಕ್ಷಿ ಮದುವೆ ಮಾಡುವುದಿಲ್ಲ ಹಾಗೂ ಹೆಣ್ಣನ್ನು ಕೊಡುವುದಿಲ್ಲ ಎಂದಾಗ ಆರೋಪಿಗಳೆ ಸರಳವಾಗಿ ವಿವಾಹ ಮಾಡಿಕೊಡಲು ಕೇಳಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಮಗಳನ್ನು 1 ನೇ ಆರೋಪಿಗೆ ಕೊಟ್ಟು ವಿವಾಹ ಮಾಡಲು ನಿಮಗೆ ಇಷ್ಟ ಇದ್ದಿರಲಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ಮಗಳಿಗೆ ಇಷ್ಟ ಇತ್ತೊ ಅಥವಾ ಇದ್ದಿರಲಿಲ್ಲವೋ ಎಂದರೆ ಸಾಕ್ಷಿ ಮಗಳಿಗೆ ಇಷ್ಟ ಇತ್ತು ಎಂದು ನುಡಿಯುತ್ತಾರೆ. ಮದುವೆ ನಂತರ ಬೀಗರ ಊಟವನ್ನು ಆರೋಪಿ ಕಡೆಯವರು ಗ್ರಾಂಡ್ ಆಗಿ ಮಾಡಿದ್ದರ ಎಂದರೆ ಸಾಕ್ಷಿ ಸುಮಾರಾಗಿ ಮಾಡಿದ್ದರು ಎಂದು ನುಡಿಯುತ್ತಾರೆ. ನೀವು ಎಷ್ಟು ಜನ ಹೋಗಿದ್ದಿರಿ ಎಂದರೆ ಸಾಕ್ಷಿ 100 ಜನ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಆರೋಪಿಗಳು ವಕೀಲರು ಮತ್ತು ಶಿಕ್ಷಕರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ, 2 ಮತ್ತು 3 ನೇ ಆರೋಪಿಗಳ ಇನ್ನೊಬ್ಬ ಮಗಳು ಡಾಕ್ಟರ್ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮಗಳನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡುವ ಮೊದಲು ಅವರ ಕುಟುಂಬದವರ ಬಗ್ಗೆ ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1 ನೇ ಆರೋಪಿಯು 2 ಮತ್ತು 3 ನೇ ಆರೋಪಿಗಳಿಗೆ ಒಬ್ಬನೆ ಗಂಡು ಮಗ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಮಗನಾಗಿ ತಮ್ಮ ಕುಟುಂಬದ ಜವಾಬ್ದಾರಿಯನ್ನು ಅವರೇ ನೋಡಿಕೊಳ್ಳಬೇಕು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

1 ನೇ ಆರೋಪಿಯು ಮದುವೆಯಾದ ನಂತರ ಮಾಗಡಿಯಲ್ಲಿ ಮನೆ ಮಾಡುವವರೆಗೂ ಎಲ್ಲಿ ಇದ್ದರು ಎಂದರೆ ಸಾಕ್ಷಿ ನಮ್ಮ ಮನೆಯಿಂದ ಓಡಾಡುತ್ತಿದ್ದರು ನಂತರ ಅವರ ನಡವಳಿಕೆ ಸರಿಇಲ್ಲದ ಕಾರಣ ಬೇರೆ ಮನೆ ಮಾಡಲು ಹೇಳಿದ್ದೆವು ಎಂದು ನುಡಿಯುತ್ತಾರೆ. ಅವರ ನಡವಳಿಕೆ ಸರಿ ಇರುವುದಿಲ್ಲವೆಂದು ನಿಮ್ಮ ಗಮನಕ್ಕೆ ಬಂದಿರುತ್ತದೆಯೋ ಅಥವಾ ನಿಮ್ಮ ಮಗಳು ಹೇಳಿರುತ್ತಾರೋ ಎಂದರೆ ಸಾಕ್ಷಿ ನನ್ನ ಮಗಳೂ ಹೇಳಿರುತ್ತಾರೆ ಹಾಗೂ ನನ್ನ ಗಮನಕ್ಕೂ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ 1 ನೇ ಆರೋಪಿಯ ನಡವಳಿಕೆ ಸರಿ ಹೋಗಲಿ ಎಂದು ಬೇರೆ ಮನೆ ಮಾಡಿರುತ್ತೀರಾ ಎಂದರೆ ಸಾಕ್ಷಿ 1 ನೇ ಆರೋಪಿಯು ಚಾಸಾ-1 ರವರ ಸಂಬಳವನ್ನು ಅವರೇ ತೆಗೆದುಕೊಳ್ಳುತ್ತಿದ್ದರು ಹಾಗೂ ನಾವೇ ಜವಾನರಾಗಿ 1 ನೇ ಆರೋಪಿಯ ಕೆಲಸ ಮಾಡಬೇಕಾಗಿತ್ತು ಆ ಸಂಬಂಧ ಬೇರೆ ಮನೆ ಮಾಡಲು ಹೇಳಿದ್ದೆವು ಎಂದು ನುಡಿಯುತ್ತಾರೆ. ಮನೆಯನ್ನು ನೀವು ಮಾಡಿರುತ್ತೀರೋ ಅಥವಾ 1 ನೇ ಆರೋಪಿ ಮಾಡಿರುತ್ತಾರೋ ಎಂದರೆ ಸಾಕ್ಷಿ ನನ್ನ ಮಗಳ ದುಡ್ಡಿನಲ್ಲಿ 1 ನೇ ಆರೋಪಿಯು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸರಿಗೆ ನೀವು ಹೇಳಿಕೆ ಕೊಟ್ಟಿದ್ದೀರೋ ಅಥವಾ ಇಲ್ಲವೋ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಹೇಳಿಕೆಯಲ್ಲಿ ಮನೆಯನ್ನು ನಾನು ಮಾಡಿಕೊಟ್ಟಿರುತ್ತೇನೆ ಎಂದು ಹೇಳಿಕೆ ಕೊಟ್ಟಿರುತ್ತೀರೋ ಅಥವಾ ಇಲ್ಲವೋ ಎಂದರೆ ಸಾಕ್ಷಿ ನಾನು ಆ ರೀತಿ ಹೇಳಿಕೆ ಕೊಟ್ಟಿರುವುದಿಲ್ಲವೆಂದು ನುಡಿಯುತ್ತಾರೆ.

ದಿನಾಂಕ 26.06.2021 ರ ನಂತರ ನೀವು 1 ನೇ ಆರೋಪಿಯನ್ನು ಬೇಟಿ ಆಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿನದಂದು ನೀವು 1 ನೇ ಆರೋಪಿಯವರ ಮನೆಗೆ ಎಷ್ಟು ಗಂಟೆಗೆ

ಬಂದಿರುತ್ತೀರಿ ಎಂದರೆ ಸಾಕ್ಷಿಯು ರಾತ್ರಿ 9.30 ಕ್ಕೆ ಎಂದು ನುಡಿಯುತ್ತಾರೆ. ಆ ದಿನದಂದೇ ನಿಮ್ಮ ಮಗಳಿಗೆ 1 ನೇ ಆರೋಪಿಯು ಸರಿಯಾದ ಗಂಡ ಅಲ್ಲ ಎಂದು ನಿಮ್ಮ ಗಮನಕ್ಕೆ ಬಂದಿತ್ತ ಎಂದರೆ ಸಾಕ್ಷಿ ಅದಕ್ಕಿಂತ ಮುಂಚೆಯೂ ಬಂದಿತ್ತು ಎಂದು ನುಡಿಯುತ್ತಾರೆ. ಆ ದಿನ ನೀವು , ನಿಮ್ಮ ಪತ್ನಿ ಹಾಗೂ ನಿಮ್ಮ ಮಗಳು ಪುನಃ ಮನೆಗೆ ಬರಬಾರದು ಎಂದು ತೀರ್ಮಾನ ಮಾಡಿ ಹೋಗಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮೂವರ ಕಟ್ಟ ಕಡೆಯ ತೀರ್ಮಾನ ಸಹ ಅದೇ ಆಗಿತ್ತ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳ ವಿರುದ್ದ ಹೊರಿಸಿರುವ ಆರೋಪಿಗಳು ದಿನಾಂಕ 26.06.2021 ರ ಮುಂಚಿನ ಆರೋಪಗಳ ಅಥವಾ ದಿನಾಂಕ 26.06.2021 ರ ನಂತರದ ಆರೋಪಗಳ ಎಂದರೆ ಸಾಕ್ಷಿ ದಿನಾಂಕ 26.06.2021 ರ ಮುಂಚೆ ಆದಂತಹ ಆರೋಪಗಳು ಎಂದು ನುಡಿಯುತ್ತಾರೆ. ದಿನಾಂಕ 26.06.2021 ಹಾಗೂ ದಿನಾಂಕ 27.06.2021 ರಂದು ಆರೋಪಿಗಳ ವಿರುದ್ದ ದೂರನ್ನು ಕೊಡಲು ಏನಾದರೂ ತೊಂದರೆ ಇತ್ತೆ ಎಂದರೆ ಸಾಕ್ಷಿ ತೊಂದರೆ ಇದ್ದಿರಲಿಲ್ಲವೆಂದು ನುಡಿಯುತ್ತಾರೆ. 1 ನೇ ಆರೋಪಿ ಮತ್ತು ಚಾಸಾ-1 ರವರು ವೈವಾಹಿಕ ಜೀವನವನ್ನು ಮಾಗಡಿಯಲ್ಲೆ ಮಾಡಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕಡೆಯ ದಿನ ಗಲಾಟೆ ನಡೆದಿದ್ದೂ ಮಾಗಡಿಯಲ್ಲೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ದೂರನ್ನು ತಯಾರಿಸಿದ ನಿಮ್ಮ ವಕೀಲರಿಗೆ ಹೇಳಿದ್ದಿರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 26.06.2021 ರಿಂದ ದಿನಾಂಕ 04.09.2021 ರ ವರೆಗೆ 1 ನೇ ಆರೋಪಿಗೆ ಚಾಸಾ-1 ರವರ ಜೊತೆ ವೆಎವಾಹಿಕ ಜೀವನ ನಡೆಸುವಂತೆ ಏನಾದರೂ ಕೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ವಿಚ್ಛೇಧನಕ್ಕಾಗಿ ನೋಟೀಸ್ ಬಂದಿತ್ತು ಆ ಕಾರಣ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚ್ಛೇಧನ ನೋಟೀಸಿಗೆ

ತಕರಾರು ಕೊಟ್ಟಿರುತ್ತೀರಾ ಹಾಗೂ ವಕೀಲರನ್ನು ನೇಮಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ವಿಚ್ಛೇಧನಕ್ಕೆ ನಿಮ್ಮ ಸಹಮತ ಇತ್ತ ಎಂದರೆ ಸಾಕ್ಷಿ ಅವರಾಗೆ ವಿಚ್ಛೇಧನಕ್ಕೆ ಅರ್ಜಿ ಸಲ್ಲಿಸಿದ್ದರಿಂದ ನಾವು ಸುಮ್ಮನೆ ಇದ್ದೆವು ಎಂದು ನುಡಿಯುತ್ತಾರೆ. ವಿಚ್ಛೇಧನಕ್ಕಾಗಿ 1 ನೇ ಆರೋಪಿಯು ಅರ್ಜಿ ಸಲ್ಲಿಸಿದ್ದಾರೆ ಎಂಬ ಉದ್ದೇಶದಿಂದ ಪ್ರಸ್ತುತ ಪ್ರರಕಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ನಾವು ದೂರನ್ನು ಕೊಟ್ಟ ನಂತರ ಅವರು ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ.

ನ್ಯಾಯಾಲಯದಿಂದ ವಿಚ್ಛೇಧನ ಆಗಿರುತ್ತದೆ ಎಂದು ಯಾವಾಗ ನಿಮ್ಮ ಗಮನಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿ ನಾವು ಮೊಬೈಲ್ ನಲ್ಲಿ ನೋಡಿದಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ 1 ನೇ ಆರೋಪಿಯು ನಿಮ್ಮಗಳ ವಿರುದ್ದ ಏನೆಲ್ಲಾ ಆರೋಪ ಮಾಡಿದ್ದಾರೆ ಎಂದು ನಿಮಗೆ ಗೊತ್ತು ಎಂದರೆ ಸಾಕ್ಷಿ ವಿಚ್ಛೇಧನ ಪ್ರತಿಯಲ್ಲಿ ಏನೆಲ್ಲಾ ಇದೆ ಎಂದು ನನಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ವಿಚ್ಛೇಧನ ಪ್ರತಿಯಲ್ಲಿ ನಿಮ್ಮ ಪರವಾಗಿ ಆದೇಶ ಆಗಿರುತ್ತದೆಯೇ ಅಥವಾ ನಿಮ್ಮ ವಿರುದ್ದ ಆದೇಶ ಆಗಿರುತ್ತದೆಯೋ ಎಂದರೆ ಸಾಕ್ಷಿ ನಾವು ಕೇಸಿಗೆ ಹಾಜರಾಗದ ಕಾರಣ ಅದನ್ನು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚ್ಛೇಧನ ಆದೇಶ ಬಂದ ನಂತರ ನಿಮ್ಮ ಮಗಳ 2 ನೇ ವಿವಾಹ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1 ನೇ ಆರೋಪಿಯನ್ನು ನಿಮ್ಮ ಮನೆ ಅಳಿಯನಾಗಿ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ನೀವು , ನಿಮ್ಮ ಪತ್ನಿ ಹಾಗೂ ನಿಮ್ಮ ಮಗಳು ಮದುವೆಗೆ ಒಪ್ಪಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಗೆ ನಿಮ್ಮ ಮನೆಯವರು ಅದೇ ಉದ್ದೇಶದಿಂದ ಹಿಂಸೆ ನೀಡುತ್ತಿದ್ದಿರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 1 ನೇ

ಆರೋಪಿಯು ಒಪ್ಪದೇ ಇದ್ದ ಕಾರಣ ಈ ಸುಳ್ಳು ದೂರನ್ನು ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿ ಕಡೆಯಿಂದ ಉಳಿದ ಆರೋಪಿಗಳಿಂದ ಹಣವನ್ನು ಪಡೆಯುವ ಸಲುವಾಗಿ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿಇಲ್ಲ ಎಂದು ನುಡಿಯುತ್ತಾರೆ. ನೀವು ಮಾಡಿರುವ ಅಪರಾಧಗಳಿಗಾಗಿ 1 ನೇ ಆರೋಪಿಯು ನಿಮ್ಮ, ನಿಮ್ಮ ಪತ್ನಿ, ನಿಮ್ಮ ಮಗಳು ಹಾಗೂ ಇತರರ ವಿರುದ್ದ ಇದೇ ನ್ಯಾಯಾಲಯದಲ್ಲಿ ಪಿಸಿಆರ್ ನಂ.216/2021 ರಂತೆ ದೂರನ್ನು ದಾಖಲಿಸಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಆರೋಪಿಗಳ ಹಣಕಾಸಿನ ವ್ಯವಹಾರ ಚೆನ್ನಾಗಿ ಇದ್ದು ಬೇರೆ ಹಣದ ಅವಶ್ಯಕತೆ ಅವರಿಗೆ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮನೆಯ ಹಣದ ಪರಿಸ್ಥಿತಿ ಸರಿ ಇರುವುದಿಲ್ಲ ಎಂಬ ಕಾರಣದಿಂದಲೇ ಆರೋಪಿಗಳು ಸರಳ ವಿವಾಹಕ್ಕೆ ಸೂಚಿಸಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮಗಳ ಸಂಬಳ ಹೊರತು ನಿಮಗೆ ಬೇರೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೋಸ್ಕರ ನಿಪಿ-10 ಮತ್ತು 11 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಪೋಲಿಸರಿಗೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಮಹಜರ್ ಸಾಕ್ಷಿಗಳನ್ನು ಹಾಗೂ ಇತರೆ ಸಾಕ್ಷಿಗಳನ್ನು ನೀವೆ ಹೇಳಿ ಕಳುಹಿಸಿರುತ್ತೀರಿ ಎಂದರೆ ಸಾಕ್ಷಿ ನಾನು ಕಳುಹಿಸಿರುವುದಿಲ್ಲ ಆದರೆ ಸಾಕ್ಷಿಗಳು ನಮ್ಮ ಊರಿನವರು ಎಂದು ನುಡಿಯುತ್ತಾರೆ. ಪೋಲಿಸರಿಗೆ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**